ಎಂಬುದಾಗಿ ತಿಳಿದುಬಂದಿದೆ. ಅಲ್ಲಿಗೂ ಕೂಡ ಒಂದು ಡಾಕ್ಟರುಗಳ ಸ್ಪೆಷಲ್ ಟೀಮನ್ನು ಕಳುಹಿಸಿದ್ದೇನೆ. ಇದು ಏನೆಂಬುದನ್ನು ಕಂಡು ಹಿಡಿಯದೆ ನಾವು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದೇನೆಂಬುದನ್ನು ಕಂಡು ಹಿಡಿಯುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ಈಗ ಈ ಕಾಯಿಲೆಯಿಂದ ನರಳುತ್ತಿರುವವರ ಸಂಖ್ಯೆ 125ಕ್ಕೆ ಮುಟ್ಟಿದೆ. ಆದರೆ ಅಲ್ಲಿ ಆಸ್ಪತ್ರೆಯಲ್ಲಿ 45 ಕೇಸುಗಳನ್ನು ಮಾತ್ರ ಟ್ರೀಟ್ ಮಾಡಲಾಗುತ್ತಿದೆ. ಅಲ್ಲಿ ಭರ್ತಿಯಾಗಿರುವುದರಿಂದ ಬೇರೆಯವರಿಗೆ ಅಲ್ಲಿ ಸ್ಥಳವಿಲ್ಲ. ಈ ರೋಗಿಗಳನ್ನು ಬೇರೆ ಜಾಗದಲ್ಲಿಟ್ಟು ಟ್ರೀಟ್‌ಮೆಂಟ್ ಕೊಡುವುದಕ್ಕಾಗುವುದಿಲ್ಲ. ಆ ಕಾಯಿಲೆಯಿಂದ ನರಳುತ್ತಿರುವ ಪುಣ್ಯಳನ್ನು ನೋಡುವುದಕ್ಕೆ ಸಾಧ್ಯವಾಗದೆ ಅವರನ್ನೆಲ್ಲಾ ಜೀಪಿನಲ್ಲಿ ಇಲ್ಲಿಗೆ ತರಲಾಗಿದೆ. ಆದರೆ ಅಲ್ಲಿ ತಕ್ಷಣಕ್ಕೆ ಸರ್ಕಾರದವರು ಒಂದು ಹಂಗಾಮಿ ಷೆಡ್ಡನ್ನಾದರೂ ಮಾಡಿ ಇವರಿಗೆ ಟ್ರೀಟ್‌ಮೆಂಟ್ ಕೊಡುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಲೇಬೇಕು ಮತ್ತು ಅವರಿಗೆ ಡಯಟ್ ವ್ಯವಸ್ಥೆ ಕೂಡ ಆಗಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಛತ್ರ ಗಿತ್ರ ಏನಾದರೂ ಇದ್ದರೆ ಅಥವಾ ಬೇರೆ ಕಟ್ಟಡಗಳ ಸೌಕರ್ಯವಿದ್ದರೆ ಹೇಳಿ ಅದನ್ನೂ ಮಾಡೋಣ. ಆದರೆ ಟೆಂಪರರಿಯಾಗಿ ಟೆಂಟ್ ಹಾಕುವುದರಿಂದ ಏನೂ ಉಪಯೋಗವಾಗಲಾರದೆಂದು ನನ್ನ ಅಭಿಪ್ರಾಯ.

ಶ್ರೀ ಕೋಣಂದೂರು ಲಿಂಗಪ್ಪ —ನಮ್ಮ ಗ್ರಾಮದಲ್ಲೂ ಕೂಡ ಈ ರೋಗ ಕೇವಲ ಆ ಒಂದು ಸೊನಗಾರರ್ ಜಾತಿಯ ಜನರಿಗೆ ಮಾತ್ರವೇ ಬಂದಿದೆ.... ಅವರ ಕೇರಿಯಲ್ಲಿ ಮಾತ್ರ ಇದಿದೆ.

(ii) *Re* : Spread of Kyasanoor forest disease in *Sagar* Taluk.

SRI KAGODU THIMMAPPA (Sagar)—Sir, I call the attention of the Minister for Health to the Spread of 'Kyasanoor' forest disease in Sagar Taluk.

SRI H. SIDDAVEERAPPA (Minister for Health):—I beg to make the following Statement.

REGARDING KYASANOOR FOREST DISEASE IN SAGAR TALUK

ಕೆರೂರು ಹೋಬಳಿಯ ಮ್ಯಾಲೂರು ಗ್ರಾಮದಲ್ಲಿ ಈವರೆಗೆ 35 ಜನರಿಗೆ ಜ್ವರ ತಗಲಿದ್ದು ಕಂಡುಬಂದಿದೆ. ಅವರ ಪೈಕಿ 7 ಜನರಿಗೆ ಮಾತ್ರ ಕೆ. ಎಫ್. ಡಿ. ಕಾಯಿಲೆ ಎಂಬುದಾಗಿ ಸಂಶಯ ಪಡಲಾಗಿದೆ. ಖಾಯಿಲೆ ತಗುಲಿದ ಜನರು ನಿಟ್ಟೂರು ಆರೋಗ್ಯ ಕೇಂದ್ರಕ್ಕೆ ಉಪಚಾರಕ್ಕಾಗಿ ಹೋಗುತ್ತಾರೆ. ಅತಿ ಹೆಚ್ಚು ಖಾಯಿಲೆಯಿಂದ ಬಳಲುತ್ತಿದ್ದವರನ್ನು ನಿಟ್ಟೂರು ತುಮರಿ ಮತ್ತು ಬೈಕೋಡು ಆರೋಗ್ಯ ಕೇಂದ್ರಗಳಲ್ಲಿ ಸೇರಿಸಲಾಗಿದೆ. ಅವರುಗಳು ಖಾಯಿಲೆಯಿಂದ ಗುಣ ಮುಖರಾಗುತ್ತಿದ್ದಾರೆ. ಆರೋಗ್ಯ ಸಿಬ್ಬಂದಿಯವರು ಸ್ಥಳಕ್ಕೆ ಭೇಟಿ ಕೊಟ್ಟಾಗ ಖಾಯಿಲೆ ಇದ್ದವರಿಗೆ ಸ್ಥಳದಲ್ಲಿಯೇ ಚಿಕಿತ್ಸೆ ಮಾಡಲಾಯಿತು. ತಜ್ಞರ ತಂಡವು ಈ ವಿಷಯದಲ್ಲಿ ಅಧ್ಯಯನ ಮಾಡುತ್ತಿದೆ. ವಿಶೇಷ ಔಷಧಗಳನ್ನು ಪೂರೈಸಲಾಗಿದೆ ಮತ್ತು ಪೂರೈಸಲಾಗುತ್ತಿದೆ. ಈ ಭಾಗದಲ್ಲಿ ಬೇರೆ ಬೇರೆ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳನ್ನು ಈ ರೋಗಿಗಳಿಗಾಗಿ ಕಾಯ್ದಿರಿಸಲಾಗಿದೆ. ಈ ಮೊದಲು ಪೂರೈಸಲಾದ ಔಷಧಗಳ ಹೊರತಾಗಿ ತಾರೀಖು 25-1-1975ರಂದು ರೂ. 3301-36 ಪೈಸೆ ಔಷಧವನ್ನು ಪೂರೈಸಲಾಗಿದೆ.

ಶ್ರೀ ಕಾಗೋಡ ತಿಮ್ಮಪ್ಪ —ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚನ್ನಬಸಪ್ಪನವರ ಕಾರ್ಯಕ್ರಮಗಳ ದೆಶೆಯಿಂದ ಆ ನಮ್ಮ ಕೆರೂರು ಈ ದಿವನ ಒಂದು ದ್ವೀಪಾಂತರ ಪ್ರದೇಶವಾಗಿ ಉಳಿದಿದೆ. ಅಲ್ಲಿಗೆ ಸರಾಗವಾಗಿ ಹೋಗುವುದಕ್ಕೆ ರಸ್ತೆ ಸಂಪರ್ಕವಿಲ್ಲ. ಅಲ್ಲೇನು ಈಗ ಎರಡು ಕಡೆ ಆರೋಗ್ಯ ಕೇಂದ್ರಗಳನ್ನು ಮಾಡಿದೆ ಅಲ್ಲಿ ಸಾಕಷ್ಟು ಸ್ಥಳವಿಲ್ಲ. ಅಲ್ಲಿ ಸಾಲದ್ದಕ್ಕೆ ಮಂಗಗಳ ಹಾವಳಿ ಬೇರೆ. ಆದುದರಿಂದ ಇವರನ್ನು ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಬದಲು ಅಲ್ಲೇ ಸ್ಥಳದಲ್ಲೇ ಅವರಿಗೆ ಟ್ರೀಟ್‌ಮೆಂಟ್ ಕೊಡುವುದಕ್ಕೆ ಸೂಕ್ತ ವಾರ್ಡಿನ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಯೇ ?

ಶ್ರೀ ಹೆಚ್. ಸಿದ್ದವೀರಪ್ಪ :— ಬೇಕಾದಷ್ಟು ಕಟ್ಟಡಗಳಿವೆ ಅಲ್ಲಿ, ಬೇಕಾದರೆ ಸಂಬಂಧಪಟ್ಟ ಎಚ್. ಪಿ. ಸಿ. ಗೆ ಹೇಳುತ್ತೇನೆ. They can afford to give some buildings. Immediately ಬೇಕು ಅನ್ನುವುದಾದರೆ I will request them to keed some buildings at our disposal.

(*iii*) *Re* : acute scarcity of drinking water in Hassan Taluk.

SRI K. H HANUME GOWDA (Hassan) :— I call the attention of the Hon. Minister for Rural Development